ಸಿಸಿ ನಂಃ 5587/2021
ಸಿ.ಡ್ಬ್ಯೂ 4/ಪಿ.ಡಬ್ಲ್ಯೂ 4

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 5587/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುನಾಥ ಘಂಟಿ |
| ತಂದೆಯ ಹೆಸರು | ಃ | ಹುಲಿಗೆಪ್ಪ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 21-09-2023**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನಾನು ಈ ಮೊದಲು ನೋಡಿಲ್ಲ . ಕಳೆದ ಒಂದುವರೆದ ವರ್ಷದ ಹಿಂದೆ ಪೋಲಿಸರು ನನ್ನ ಸಮಕ್ಷಮ ಆರೋಪಿತನಿಂದ ಒಂದು ನೋಟು ಮತ್ತು ಒಂದು ಮೋಟರ್ ಸೈಕಲ್ ಜಪ್ತುಪಡಿಸಿಕೊಂಡಿದ್ದರು . ಅದೇ ಸಮಯಕ್ಕೆ ಆತನಿಂದ ಒಂದು ಆಧಾರ ಕಾರ್ಡ ಸಹ ಜಪ್ತುಪಡಿಸಿಕೊಂಡು ಪಂಚ ಎಂದು ಸಹಿ ಪಡೆದಿದ್ದರು . ಸದರಿ ನನ್ನ ಸಹಿಯುಳ್ಳ ಪಂಚನಾಮೆಯನ್ನು ನಿಶಾನೆ-ಪಿ-8 ಎಂದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-8 (ಎ) ಎಂದು ಗುರುತಿಸಲಾಯಿತು . ಅದೇ ಕಾಲಕ್ಕೆ ಪೋಲಿಸರು ಪೋಟೋ ತೆಗೆದಿದ್ದರು . ಅ ಕಾಲಕ್ಕೆ ನಮ್ಮ ಓಣಿಯ ಧರ್ಮಣ್ಣ ಚಾಸಾ-5 ಸಹ ಹಾಜರಿದ್ದ . ಆ ಕಾಲಕ್ಕೆ ತೆಗೆದ ಪೋಟೋಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನುಕ್ರಮವಾಗಿ ನಿಶಾನೆ-ಪಿ-9 ರಿಂದ 11 ಎಂದು ಗುರುತಿಸಲಾಯಿತು . ಸದರಿ ಪಂಚನಾಮೆಯನ್ನು ಮಧ್ಯಾಹ್ನದ ಸಮಯಕ್ಕೆ ಮಾಡಿದ್ದರು . ಆ ದಿನ ಜಪ್ತುಪಡಿಸಿಕೊಂಡ ಹಣ ಎಷ್ಟು ಇತ್ತು ಎಂದು ನನಗೆ ಈಗ ನೆನಪಿಲ್ಲ . ಆ ದಿನ ಜಪ್ತುಪಡಿಸಿಕೊಂಡ ಮೋಟರ್ ಸೈಕಲ್ ನಂಬರ ನನಗೆ ನೆನಪಿಲ್ಲ . ಆದರೆ ಸದರಿ ಮೋಟರ್ ಸೈಕಲ್ ನಿಶಾನೆ-ಪಿ-9 ರಿಂದ 11 ರಲ್ಲಿ ಇದೆ . ಅ ದಿನ ನಮ್ಮ ಸಮಕ್ಷಮ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಸಹ ಹಾಜರಿದ್ದ . ಆತನಿಂದಲೇ ಪೋಲಿಸರು ಮೋಟರ್ ಸೈಕಲ್ , ನಗದು ಹಣ ಹಾಗೂ ಒಂದು ಕಾಗದ ಜಪ್ತುಪಡಿಸಿಕೊಂಡಿದ್ದರು .

ಸಿಸಿ ನಂಃ 5587/2021
ಸಿ.ಡ್ಬ್ಯೂ 4/ಪಿ.ಡಬ್ಲ್ಯೂ 4

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಆ ದಿನ ಆರೋಪಿತನಿಂದ ಜಪ್ತುಪಡಿಸಿಕೊಂಡ ಮೋಟರ್ ಸೈಕಲ್ ನಂ ಃ ಕೆಎ-25/ಎಚ್ ಡಿ-5524 ಆಗಿತ್ತು ಎಂದರೆ ಸರಿ . ಆ ದಿನ ಆತನಿಂದ ರೂ.500/- ಮುಖಬೆಲೆಯ 7 ನೋಟುಗಳು ಒಟ್ಟು ರೂ.3500/- ಜಪ್ತುಪಡಿಸಿಕೊಂಡಿದ್ದರು ಎಂದರೆ ಸಾಕ್ಷಿ ನೋಟುಗಳು ಇದ್ದವು ಆದರೆ ಎಷ್ಟು ಇದ್ದವು ಎಂದು ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ . ಆ ದಿನ ಪೋಲಿಸರು ಆರೋಪಿತನಿಂದ ಪರಮೇಶ್ವರ ಅವರಸಾ ಎನ್ನುವವರ ಪ್ಯಾನ ಕಾರ್ಡನ ಝೇರಾಕ್ಸ ಪ್ರತಿಯನ್ನು ಸಹ ಜಪ್ತುಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ವಸ್ತುಗಳನ್ನು ನಿಶಾನೆ-ಪಿ-8 ರಂತೆ ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದರು ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಜಪ್ತುಪಡಿಸಿಕೊಂಡ ನೋಟುಗಳು ನಿಶಾನೆ-ಪಿ-11 ರ ಪೋಟೋದಲ್ಲಿ ಇವೆ ಎಂದರೆ ಸರಿ . ಸದರಿ ಪೋಟೋದಲ್ಲಿ ಜಪ್ತುಪಡಿಸಿಕೊಂಡ ಪ್ಯಾನ ಕಾರ್ಡ ಪ್ರತಿ ಸಹ ಇದೆ ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತನಿಗೆ ಸಾಕ್ಷಿಗೆ ಯಾವುದೇ ಪ್ರಶ್ನೆ ಕೇಳವುದು ಇಲ್ಲ ಎಂದು ಹೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.